# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 1403 |
| ಸದಸ್ಯರು ಹೆಸರು | : | ಡಾ. ಕೆ.ಗೋವಿಂದರಾಜ್,<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21.08.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ ಮೂರು ವರ್ಷಗಳಲ್ಲಿ, ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಇನ್ನಿತರ ನಗರಗಳಲ್ಲಿ ವ್ಹೀಲಿಂಗ್ ಹಾವಳಿಯಿಂದ ಘಟಿಸಿರುವ ಅಪಘಾತಗಳು ಪ್ರಾಣಹಾನಿ ಸಂಖ್ಯೆ ಎಷ್ಟು;</td><td>ಕಳೆದ ಮೂರು ವರ್ಷಗಳಲ್ಲಿ, ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಇನ್ನಿತರ ನಗರಗಳಲ್ಲಿ ವ್ಹೀಲಿಂಗ್ ಹಾವಳಿಯಿಂದ ಘಟಿಸಿರುವ ಅಪಘಾತಗಳು ಹಾಗೂ ಪ್ರಾಣಹಾನಿಯ ವಿವರಗಳು ಈ ಕೆಳಕಂಡಂತಿರುತ್ತವೆ:-
<table>
<tr><th>ವರ್ಷ</th><th>ವೀಲ್ಹಿಂಗ್‌ನಿಂದ ಸಂಭವಿಸಿರುವ ಅಪಘಾತಗಳು</th><th>ವೀಲ್ಹಿಂಗ್‌ನಿಂದ ಸಂಭವಿಸಿರುವ ಪ್ರಾಣಹಾನಿ</th></tr>
<tr><td>2022</td><td>0</td><td>0</td></tr>
<tr><td>2023</td><td>03</td><td>01</td></tr>
<tr><td>2024</td><td>04</td><td>0</td></tr>
<tr><td>2025 (ಜುಲೈ ಅಂತ್ಯ ದವರೆಗೆ)</td><td>01</td><td>0</td></tr>
<tr><td>ಒಟ್ಟು</td><td>08</td><td>01</td></tr>
</table>
</td></tr>
<tr><td>(ಆ)</td><td>ಈ ವ್ಹೀಲಿಂಗ್ ಹಾವಳಿ ತಡೆಗಟ್ಟಲು ಹಾಗೂ ಬೈಕ್ ಸವಾರರ ರಸ್ತೆ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳೇನು:</td><td>
➢ ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ನಿಯಮ ಉಲ್ಲಂಘನೆಗಳ ಬಗ್ಗೆ ಪ್ರವರ್ತನಾ ಚಟುವಟಿಕೆಯನ್ನು ಕೈಗೊಳ್ಳುವ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಸುತ್ತೋಲೆ ಸಂಖ್ಯೆ: 176ನ್ನು ಹೊರಡಿಸಿದ್ದು, ಸುತ್ತೋಲೆ ರೀತ್ಯಾ ಕ್ರಮ ವಹಿಸಲಾಗುತ್ತಿದೆ. ಇದನ್ನು ಅನುಬಂಧ ದಲ್ಲಿರಿಸಲಾಗಿದೆ.<br>
➢ ರಾಜ್ಯದ ಎಲ್ಲಾ ಘಟಕಗಳಲ್ಲಿ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವ ಬೈಕ್ ಸವಾರರುಗಳ ವಿರುದ್ಧ ಬಿ.ಎನ್.ಎಸ್. ಕಾಯ್ದೆಯಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಸವಾರರುಗಳನ್ನು ದಸ್ತಗಿರಿ ಮಾಡಿ, ಸದರಿ ವಾಹನಗಳನ್ನು ಅಮಾನತ್ತುಗೊಳಿಸಲಾಗುತ್ತಿದೆ.<br>
➢ ವ್ಹೀಲಿಂಗ್ ಮಾಡುವ ಅಪ್ರಾಪ್ತ ಬೈಕ್ ಸವಾರರುಗಳ ವಿರುದ್ಧ ಜ್ಯುವೆನೈಲ್ ಆಕ್ಟ್ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಹಾಗೂ ಅಪ್ರಾಪ್ತ ಸವಾರರುಗಳ ಪೋಷಕರುಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ.<br>
➢ ಬೆಂಗಳೂರಿನ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಹಾಗೂ ಸಂಚಾರ ನಿರ್ವಹಣಾ ಕೇಂದ್ರಕ್ಕೂ ಸಹ ಭೇಟಿ ನೀಡುವ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಬಸ್/ಆಟೋ/ಕ್ಯಾಬ್ ಚಾಲಕರುಗಳಿಗೂ ಸಹ ವ್ಹೀಲಿಂಗ್ ಮಾಡುವುದರಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ತಿಳಿಸಿ, ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.
</td></tr>
</table>

| | | | |
|---|---|---|---|
| | | | ➢ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವ ಬೈಕ್ ಸವಾರರುಗಳ ಚಾಲನಾ ಅನುಜ್ಞಾ ಪತ್ರಗಳನ್ನು ಕಡ್ಡಾಯವಾಗಿ ಅಮಾನತ್ತು-ಗೊಳಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ.<br>➢ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವ ವಾಹನಗಳ ನೋಂದಣಿ ಪುಸ್ತಕಗಳನ್ನು ರದ್ದುಪಡಿಸಲು ಸಂಬಂಧಪಟ್ಟ ಆರ್.ಟಿ.ಒ. ಕಛೇರಿಗೆ ಶಿಫಾರಸ್ಸುಗಳನ್ನು ಕಳುಹಿಸಲಾಗುತ್ತಿದೆ.<br>➢ ರಾಜ್ಯದ ಎಲ್ಲಾ ಘಟಕಗಳಲ್ಲಿ ವ್ಹೀಲಿಂಗ್ ಮಾಡುತ್ತಾ ಇತರೆ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯನ್ನುಂಟು ಮಾಡುತ್ತಿರುವ ಸವಾರರುಗಳ ವಿರುದ್ಧ ಕಾಲಕಾಲಕ್ಕೆ ವಿಶೇಷ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.<br>➢ ವ್ಹೀಲಿಂಗ್‌ನಲ್ಲಿ ಭಾಗಿಯಾದ ಸವಾರರುಗಳನ್ನು ಕಲಂ. 107 ಸಿಆರ್‌ಪಿಸಿ ರೀತ್ಯಾ ಸಂಬಂಧಪಟ್ಟ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ರವರ (ಕಾನೂನು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರು) ಮುಂದೆ ಪಿ.ಎ.ಆರ್. ದಾಖಲಿಸಲಾಗುತ್ತಿದೆ.<br>➢ ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕುವ ದೃಷ್ಟಿಯಿಂದ ನಗರ ಸಂಚಾರ ಪೊಲೀಸ್ ಠಾಣೆಗಳಲ್ಲಿ ಸಾಮಾನ್ಯವಾಗಿ ವ್ಹೀಲಿಂಗ್ ಮಾಡುವ ರಸ್ತೆಗಳನ್ನು ಗುರುತಿಸಿ ಅಂತಹ ರಸ್ತೆಗಳಲ್ಲಿ ಗಸ್ತು ಕರ್ತವ್ಯಕ್ಕೆ ಕೋಬ್ರಾ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿರುತ್ತದೆ.<br>➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಹಾಗೂ "ಎಕ್ಸ್"ನಲ್ಲಿ ಸವಾರರಿಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.<br>➢ ಎಸ್.ಎ.ಆರ್.ಎಸ್ ಯೋಜನೆಯಡಿಯಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಸಮಯದಲ್ಲಿ ವ್ಹೀಲಿಂಗ್ ಮಾಡುವುದರಿಂದ ಆಗುವ ಅನಾಹುತಗಳ ಬಗ್ಗೆ ಶಾಲೆಗಳಿಗೆ ಭೇಟಿ ಕೊಟ್ಟು ತಿಳುವಳಿಕೆ ನೀಡಲಾಗುತ್ತಿದೆ.<br>➢ ವ್ಹೀಲಿಂಗ್ ನಿಯಮ ಉಲ್ಲಂಘನೆಯನ್ನು ಹತ್ತಿಕ್ಕಲು ಠಾಣಾ ಮಟ್ಟದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನೊಳಗೊಂಡ ತಂಡವನ್ನು ರಚಿಸಿ, ಸದರಿ ತಂಡಗಳು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಹಾಗೂ ನಿಯಮಿತವಾಗಿ ವ್ಹೀಲಿಂಗ್ ನಡೆಸುವ ರಸ್ತೆಗಳಲ್ಲಿ ನಿಗಾವಹಿಸುವ ಮೂಲಕ ಸದರಿ ನಿಯಮ ಉಲ್ಲಂಘನೆಯನ್ನು ತಡೆಗಟ್ಟಲು ಕ್ರಮ ಕೈಗೊಂಡಿರುತ್ತದೆ.<br>➢ ವ್ಹೀಲಿಂಗ್‌ನಲ್ಲಿ ಭಾಗಿಯಾಗುವ ವಾಹನಗಳ ಮಾರ್ಪಾಡಿಗೆ ಸಂಬಂಧಿಸಿದಂತೆ, ವಾಹನಗಳನ್ನು ಮಾರ್ಪಾಡು ಮಾಡುವ ಗ್ಯಾರೇಜ್‌ಗಳು ಹಾಗೂ ಮೆಕ್ಯಾನಿಕ್‌ಗಳ ವಿವರಗಳನ್ನು ಸಂಗ್ರಹಿಸಿ ಅಂತಹ ಗ್ಯಾರೇಜ್‌ಗಳ ಹಾಗೂ 'ಮೆಕ್ಯಾನಿಕ್‌ಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲು ಸಂಚಾರ ವಿಭಾಗದ ಎಲ್ಲಾ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |

| | | |
|---|---|---|
| (ಇ) | ಇಂತಹ ಪ್ರಕರಣಗಳಲ್ಲಿನ ತಪ್ಪಿತಸ್ಥರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ವಿವರಗಳನ್ನು ಒದಗಿಸುವುದು) | ➢ ವ್ಹೀಲಿಂಗ್ ನಿಯಮ ಉಲ್ಲಂಘನೆಯಲ್ಲಿ ಭಾಗಿಯಾಗುತ್ತಿರುವ ಸವಾರರುಗಳ ವಿರುದ್ಧ ಕಲಂ. 281 ಬಿ.ಎನ್.ಎಸ್. ಕಾಯ್ದೆ ಹಾಗೂ ಐ.ಎಂ.ವಿ. ಕಾಯ್ದೆ 184 ಮತ್ತು 189 ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.<br>➢ ವ್ಹೀಲಿಂಗ್ ಪ್ರಕರಣಗಳಲ್ಲಿ ಹೆಚ್ಚಾಗಿ ಅಪ್ರಾಪ್ತರು ಭಾಗಿಯಾಗುತ್ತಿದ್ದು, ಈ ರೀತಿ ಅಪ್ರಾಪ್ತರು ಭಾಗಿಯಾಗಿರುವ ಪ್ರಕರಣಗಳಲ್ಲಿ ಅಪ್ರಾಪ್ತರ ವಿರುದ್ಧ ಜ್ಯುವೆನೈಲ್ ಆಕ್ಟ್ ಅಡಿಯಲ್ಲಿ ಹಾಗೂ ಅಪ್ರಾಪ್ತರ ಪೋಷಕರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲು ಕ್ರಮ ಕೈಗೊಂಡಿರುತ್ತದೆ.<br>➢ ಬೆಂಗಳೂರು ನಗರದಲ್ಲಿ ವ್ಹೀಲಿಂಗ್‌ನಲ್ಲಿ ಭಾಗಿಯಾಗುವ ವಾಹನಗಳನ್ನು ಅಮಾನತ್ತುಪಡಿಸಿಕೊಂಡು, ವಾಹನದ ಆರ್.ಸಿ. ಪುಸ್ತಕ ಹಾಗೂ ಬೈಕ್ ಸವಾರರ ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗೆ ಕಳೆದ ಮೂರು ವರ್ಷಗಳಿಂದ ಶಿಫಾರಸ್ಸುಗಳನ್ನು ಮಾಡಲಾಗಿರುತ್ತದೆ. |

ಹೆಚ್‌ಡಿ 399 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

(3)

-ಅನುಬಂಧ-

ನಂ.176/ಸುತ್ತೋಲೆ/ಜಂಟಿ ಸಿಪಿ(ಸಂ)/2024

ಜಂಟಿ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ ವಿಭಾಗ, ನಂ.5, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ.
ದಿನಾಂಕ೨೧ನೇ ಫೆಬ್ರವರಿ 2024

ಬೆಂಗಳೂರು ಸಂಚಾರ ಪೊಲೀಸ

## ಸು ತ್ತೋ ಲೆ – 176

## ವ್ಹೀಲಿಂಗ್ ಪ್ರಕರಣಗಳನ್ನು ದಾಖಲು ಮಾಡುವಾಗ ಅನುಸರಿಸಬೇಕಾದ ಕಾರ್ಯನಿರ್ವಹಣಾ ವಿಧಾನಗಳು (Standard Operating Procedure)

ವಿಷಯ:- ವ್ಹೀಲಿಂಗ್ ಮಾಡುವ ವಾಹನಗಳ ವಿರುದ್ಧ ನಡೆಸುವ ಕಾರ್ಯಾಚರಣೆಯ ವೇಳೆ ಅನುಸರಿಸಬೇಕಾದ ನಿರ್ಧರಿತ ಕಾರ್ಯ ನಿರ್ವಹಣಾ ವಿಧಾನಗಳು

********

ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ಹಾವಳಿ ಸಹ ಒಂದಾಗಿದ್ದು ಈ ಸಂಬಂಧ ಸಾಕಷ್ಟು ಚರ್ಚೆಯಾಗುತ್ತಿರುತ್ತದೆ. ಪಡಿಪರೆಯದ ಯುವಕರು ರಸ್ತೆಯ ಮೇಲೆ ಅವರ ಮತ್ತು ಸಾರ್ವಜನಿಕರ ಪ್ರಾಣದೊಂದಿಗೆ ಚೆಲ್ಲಾಟ ನಡೆಸುತ್ತಾ, ಒಂದೇ ಚಕ್ರದಲ್ಲಿ ಬೈಕ್ ರೈಡ್ ಮಾಡುತ್ತಾ ರಸ್ತೆ ಬದಿಯಲ್ಲಿ ನಿಂತವರ ಎದೆಯಲ್ಲಿ ದಿಗಿಲು ಹುಟ್ಟಿಸುತ್ತಾ, ವ್ಹೀಲಿಂಗ್‌ನಲ್ಲಿ ತೊಡಗಿ ಸ್ವಯಂ ಅಪಘಾತಕ್ಕೀಡಾಗಿ ಸಂಭವಿಸುವ ಸಾವುಗಳನ್ನು ತಪ್ಪಿಸಲು ಹಾಗೂ ಈ ವಾಹನಗಳಿಂದ ಅಮಾಯಕ ಸಾರ್ವಜನಿಕರಿಗೆ ಸಾವುನೋವು ಉಂಟಾಗುವುದನ್ನು ತಪ್ಪಿಸುವ ಸಲುವಾಗಿ ವಿಶೇಷ ಕಾರ್ಯಾಚರಣೆಯನ್ನು ಕೈಗೊಳ್ಳುತ್ತಿರುವುದು ಸರಿಯಷ್ಟೇ

ಇತ್ತೀಚಿನ ದಿನಗಳಲ್ಲಿ ಕಳ್ಳತನ ಮಾಡಿದ, ವಾರಸುದಾರರಿಲ್ಲದ ವಾಹನಗಳನ್ನು ಉಪಯೋಗಿಸುತ್ತಾ, ನೋಂದಣಿ ಫಲಕಗಳನ್ನು ಹಾಕದೇ ಹಾಗೂ ನೋಂದಣಿ ಫಲಕಗಳನ್ನು ಮರೆಮಾಚಿ ಸಂಚಾರ ನಿಯಮ ಉಲ್ಲಂಘನೆಗಳನ್ನು ಮಾಡುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಆಗಿಂದಾಗ್ಗೆ ವಿಶೇಷ ಕಾರ್ಯಾಚರಣೆಯ ಮುಖಾಂತರ ಕ್ರಮ ಕೈಗೊಳ್ಳಲಾಗುತ್ತಿದ್ದರೂ ಸಹ, ವ್ಹೀಲಿಂಗ್ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿರುವ ನಿಟ್ಟಿನಲ್ಲಿ, ಈ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕುವ ದೃಷ್ಟಿಯಿಂದ ಇನ್ನೂ ಹೆಚ್ಚಿನ ಕಠಿಣ ಕ್ರಮಗಳನ್ನು ಕೈಗೊಳ್ಳಲು ಚಿಂತಿಸುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ ವ್ಹೀಲಿಂಗ್ ಪ್ರಕರಣಗಳನ್ನು ದಾಖಲು ಮಾಡುವ ಸಮಯದಲ್ಲಿ ತನಿಖಾಧಿಕಾರಿಗಳು ಅನುಸರಿಸಬೇಕಾದ ಕಾರ್ಯ ನಿರ್ವಹಣಾ ವಿಧಾನಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

1. ವ್ಹೀಲಿಂಗ್ ಮಾಡುವವರ ವಿರುದ್ಧ ಕಲಂ 279 ಐ.ಪಿ.ಸಿ ಹಾಗೂ 128, 184, 189 ಐ.ಎಂ.ವಿ. ಕಲಂಗಳಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವುದು. ವ್ಹೀಲಿಂಗ್‌ನಲ್ಲಿ ಭಾಗಿಯಾಗಿರುವ ವಾಹನಗಳ ಮಾಲೀಕತ್ವವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಹಾಗೂ ಕಳ್ಳತನ ಮಾಡಿದ, ಮಾರ್ಪಾಡು ಮಾಡಿದ, ಬದಲಾವಣೆ ಮಾಡಿದ ವಾಹನಗಳೇ ಎಂಬ ಬಗ್ಗೆ ಖಾತ್ರಿ ಪಡಿಸಿಕೊಳ್ಳುವ ಸಲುವಾಗಿ ವಾಹನಗಳನ್ನು ನಿಯಮಾನುಸಾರ ಜಪ್ತಿ ಮಾಡುವ ಕ್ರಮ ಕೈಗೊಂಡು, ಜಪ್ತಿ ಮಾಡಿದ ಬಗ್ಗೆ ವರದಿಯನ್ನು ಎಫ್.ಐ.ಆರ್. ಪ್ರತಿಯೊಂದಿಗೆ ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳತಕ್ಕದ್ದು.

2. ಪ್ರಕರಣಗಳನ್ನು ದಾಖಲು ಮಾಡುವ ಸಮಯದಲ್ಲಿ ಸವಾರರು, ಮದ್ಯಪಾನ, ಮಾದಕ ವಸ್ತುಗಳನ್ನು ಸೇವನೆ ಮಾಡಿರುವ ಬಗ್ಗೆ ಪರಿಶೀಲನೆ ನಡೆಸುವುದು. ಪರಿಶೀಲನಾ ಸಮಯದಲ್ಲಿ ಮದ್ಯಪಾನ ಹಾಗೂ ಮಾದಕ ವಸ್ತುಗಳ ಸೇವನೆಯ ಬಗ್ಗೆ ತಿಳಿದುಬಂದಲ್ಲಿ, ಅಂತಹ ಸವಾರರುಗಳನ್ನು ನಿಯಮಾನುಸಾರ ರಕ್ತ ಮಾದರಿಯ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

3. ವ್ಹೀಲಿಂಗ್‌ನಲ್ಲಿ ಭಾಗಿಯಾಗಿರುವ ವಾಹನವು ಕಳ್ಳತನವಾದ ವಾಹನವೇ ಅಥವಾ ಬೇರೆ ಮಾಲೀಕತ್ವದ ವಾಹನಗಳನ್ನು ಬಳಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ, ವಾಹನದ ಮೂಲ ಮಾಲೀಕರನ್ನು ಪತ್ತೆ ಹಚ್ಚಲು ಸೂಕ್ತ ಕ್ರಮ ಕೈಗೊಳ್ಳುವುದು.

4. ವ್ಹೀಲಿಂಗ್‌ನಲ್ಲಿ ಭಾಗಿಯಾಗಿರುವ ವಾಹನ ಸವಾರರುಗಳ ಚಾಲನಾ ಅನುಜ್ಞಾ ಪತ್ರವನ್ನು ಕಲಂ 19, 21 ಐ.ಎಂ.ವಿ. ಕಾಯ್ದೆ ರೀತ್ಯಾ ಅಮಾನತ್ತುಪಡಿಸಲು ಸಂಬಂಧಪಟ್ಟ ಆರ್.ಟಿ.ಓ. ಕಛೇರಿಗೆ ಶಿಫಾರಸ್ಸನ್ನು ಸಲ್ಲಿಸುವುದು. ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸಲು ಶಿಫಾರಸ್ಸನ್ನು ಕಳುಹಿಸುವುದು ಎಲ್ಲಾ ವ್ಹೀಲಿಂಗ್ ಪ್ರಕರಣಗಳಲ್ಲಿ ಕಡ್ಡಾಯವಾಗಿರುತ್ತದೆ

5. ವ್ಹೀಲಿಂಗ್‌ನಲ್ಲಿ ಭಾಗಿಯಾಗಿರುವವರು ಅಪ್ರಾಪ್ತ ವಯಸ್ಕರಾಗಿದ್ದಲ್ಲಿ ಅಂತಹವರ ಪೋಷಕರುಗಳ ವಿರುದ್ಧ ಕಲಂ 199(ಎ) ಐ.ಎಂ.ವಿ. ಕಾಯ್ದೆ ರೀತ್ಯಾ ಕ್ರಮ ಜರುಗಿಸುವುದು ಹಾಗೂ ಅಂತಹ ವಾಹನಗಳನ್ನು ವಶಕ್ಕೆ ಪಡೆದು, ಸದರಿ ವಾಹನದ ಆರ್.ಸಿ. ದಾಖಲಾತಿಯನ್ನು ಒಂದು ವರ್ಷದ ಮಟ್ಟಿಗೆ ರದ್ದುಪಡಿಸಲು ಸಂಬಂಧಪಟ್ಟ ಆರ್.ಟಿ.ಓ. ಶಿಫಾರಸ್ಸು ಕಳುಹಿಸುವುದು. ಹಾಗೂ ಅಪ್ರಾಪ್ತರಿಗೆ ಅವರ ವಯೋಮಿತಿಯು 25 ವರ್ಷಗಳು ದಾಟುವವರೆಗೆ ಚಾಲನಾ ಪರವಾನಗಿಯು ನೀಡದಂತೆ ಸಂಬಂಧಪಟ್ಟ ಆರ್.ಟಿ.ಓ. ಕಛೇರಿಗಳಿಗೆ ವಿಶೇಷ ವರದಿಯನ್ನು ಸಲ್ಲಿಸಲು ಕ್ರಮ ವಹಿಸುವುದು.

6. ವ್ಹೀಲಿಂಗ್‌ನಲ್ಲಿ ಭಾಗಿಯಾಗಿರುವ ವಾಹನಗಳು ಕಳ್ಳತನದ ವಾಹನವಾಗಿಲ್ಲದಿದ್ದಲ್ಲಿ, ಸಂಬಂಧಪಟ್ಟ ವಾಹನ ಮಾಲೀಕರುಗಳನ್ನೂ ಸಹ ಪ್ರಕರಣದ ಆರೋಪಿತರೆಂದು ಪರಿಗಣಿಸಿ ಕ್ರಮ ಕೈಗೊಳ್ಳುವುದು.

7. ಫ್ಲೀಲಿಂಗ್‌ನಲ್ಲಿ ಭಾಗಿಯಾಗಿರುವ ವಾಹನಗಳನ್ನು ಅವರ ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು, ಬದಲಾಯಿಸಿರುವ ವಾಹನಗಳಾಗಿದ್ದಲ್ಲಿ ಅಂತಹ ವಾಹನಗಳ ಆರ್.ಸಿ. ಪುಸ್ತಕಗಳನ್ನು ರದ್ದತಿಗಾಗಿ ಸಂಬಂಧಪಟ್ಟ ಆರ್.ಟಿ.ಓ. ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸುವುದು.

8. ಫ್ಲೀಲಿಂಗ್‌ನಲ್ಲಿ ಭಾಗಿಯಾದ ಸವಾರರುಗಳನ್ನು ಕಲಂ 107 ಸಿ.ಆರ್.ಪಿ.ಸಿ. ರೀತ್ಯಾ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರ (ಕಾನೂನು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರು) ಮುಂದೆ ಪಿ.ಎ.ಆರ್ ದಾಖಲಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

(ಎಂ.ಎನ್. ಅನುಚೇತ್, ಐ.ಪಿ.ಎಸ್)
ಜಂಟಿ ಪೊಲೀಸ್ ಆಯುಕ್ತರು,
ಸಂಚಾರ, ಬೆಂಗಳೂರು ನಗರ.

ರವರಿಗೆ,

ಸಂಚಾರ ವಿಭಾಗದ ಎಲ್ಲಾ ಪಿ.ಐ ರವರುಗಳಿಗೆ,

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1. ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ, ಪಶ್ಚಿಮ, ಈಶಾನ್ಯ, ಉತ್ತರ, ದಕ್ಷಿಣ, ಜಯನಗರ, ಎಚ್.ಎಸ್.ಆರ್, [illegible] ಮತ್ತು ವೈಟ್‌ಫೀಲ್ಡ್ ಉಪ ವಿಭಾಗ, ಬೆಂಗಳೂರು ನಗರ.
2. ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ, ಪಶ್ಚಿಮ, ಉತ್ತರ ವಿಭಾಗ ಮತ್ತು ದಕ್ಷಿಣ ವಿಭಾಗ, ಬೆಂಗಳೂರು ನಗರ.